ವಿದ್ಯಾರ್ಥಿಪ್ರಭ

# ವಿದ್ಯಾರ್ಥಿಗಳಿಗಾಗಿ ಪ್ರತಿಜ್ಞೆಗಳು

ಸ್ವಾಮಿ ನಿರ್ವೇದಾನಂದ

ಅನುವಾದ ಮತ್ತು ವ್ಯಾಖ್ಯಾನ:

ಸ್ವಾಮಿ ಕರುಣಾಕರಾನಂದ

( ಸ್ವಾಮಿ ನಿರ್ವೇದಾನಂದರು ರಾಮಕೃಷ್ಣ ಮಠ ಹಾಗೂ ಮಿಷನ್ನಿನ ಮೊದಲ ಅಧ್ಯಕ್ಷರಾದ ಸ್ವಾಮಿ ಬ್ರಹ್ಮಾನಂದರ ಶಿಷ್ಯರು. ಇವರು ಒಬ್ಬ ನುರಿತ ಶಿಕ್ಷಣ ತಜ್ಞರು. ಇವರು ರಚಿಸಿದ, ವಿದ್ಯಾರ್ಥಿಗಳು ಕೈಗೊಳ್ಳಬೇಕಾದ ಐದು ಪ್ರತಿಜ್ಞೆಗಳು ಇಂದಿಗೂ ರಾಮಕೃಷ್ಣ ಮಿಷನ್ನಿನ ಶಾಲೆಗಳಲ್ಲಿ ಪ್ರಚಲಿತವಾಗಿವೆ.)

## ಪ್ರತಿಜ್ಞೆಗಳ ಆವಶ್ಯಕತೆ

ವಿದ್ಯಾರ್ಥಿಯಾದವನಿಗೆ ವಿದ್ಯಾರ್ಜನೆಯೇ ಕರ್ತವ್ಯ. ಅದಕ್ಕಾಗಿ ಆದರ್ಶಮಯ ಜೀವನವಿಧಾನವನ್ನು ಅವನು ರೂಪಿಸಿಕೊಳ್ಳಬೇಕು. ಆದರ್ಶದ ಕುರಿತಾದ ಸ್ವಾಮಿ ವಿವೇಕಾನಂದರ ಈ ಸ್ಫೂರ್ತಿಯುತವಾದ ಮಾತುಗಳನ್ನು ಮನನ ಮಾಡೋಣ:

"ಒಬ್ಬ ಆದರ್ಶವಂತ ವ್ಯಕ್ತಿ ಒಂದು ಸಾವಿರ ತಪ್ಪುಗಳನ್ನು ಮಾಡಿದರೆ, ಯಾವುದೇ ಆದರ್ಶವಿಲ್ಲದ ವ್ಯಕ್ತಿಯಿಂದ ಐವತ್ತು ಸಾವಿರ ತಪ್ಪುಗಳು ಘಟಿಸುತ್ತವೆಂದು ಖಚಿತವಾಗಿ ಹೇಳಬಲ್ಲೆ. ಆದ್ದರಿಂದ ಒಂದು ಆದರ್ಶವಿರುವುದು ಒಳ್ಳೆಯದು. ಆದರ್ಶವು ನಮ್ಮ ಹೃದಯವನ್ನೂ, ಮಿದುಳನ್ನೂ ಪ್ರವೇಶಿಸುವವರೆಗೆ, ನಮ್ಮ ಧಮನಿಗಳಲ್ಲಿ, ಪ್ರತಿಯೊಂದು ರಕ್ತಕಣದಲ್ಲಿ, ದೇಹದ ಪ್ರತಿಯೊಂದು ರಂಧ್ರದಲ್ಲಿ ವ್ಯಾಪಿಸುವವರೆಗೆ, ಎಷ್ಟು ಸಾಧ್ಯವೋ ಅಷ್ಟೂ ನಾವು ಅದರ ಬಗ್ಗೆ ಕೇಳಬೇಕು. ಅದನ್ನೇ ಕುರಿತು ನಾವು ಧ್ಯಾನಿಸಬೇಕು. ಹೃದಯ ತುಂಬಿ ಬಂದಾಗ ಬಾಯಿ ಮಾತನಾಡಲಾರಂಭಿಸುತ್ತದೆ. ಹಾಗೆಯೆ ಹೃದಯ ತುಂಬಿದಾಗ ಕೈಗಳು ಕೆಲಸ ಮಾಡಲಾರಂಭಿಸುತ್ತವೆ ಎಂಬುದೂ ನಿಜ. ನಮ್ಮೊಳಗಿನ ಮುನ್ನಡೆಸುವ ಶಕ್ತಿಯೆಂದರೆ ಆಲೋಚನೆ. ಉದಾತ್ತವಾದ ಆಲೋಚನೆಗಳಿಂದ ನಿಮ್ಮ ಮಿದುಳನ್ನು ತುಂಬಿ, ದಿನನಿತ್ಯವೂ ಅವನ್ನು ಕೇಳಿ, ತಿಂಗಳುಗಟ್ಟಲೆ ಅವುಗಳ ಕುರಿತೇ ಆಲೋಚಿಸಿ. ಸೋಲಿನ ಬಗ್ಗೆ ಚಿಂತಿಸದಿರಿ; ಅವು ಸಹಜವಾದವು, ಈ ಸೋಲುಗಳೇ ಜೀವನದ ಸೌಂದರ್ಯ. ಅವುಗಳಿಲ್ಲದೆ ಜೀವನ ಹೇಗಾದೀತು? ಹೋರಾಟಗಳಿಲ್ಲದ ಜೀವನ ಜೀವನವೇ ಅಲ್ಲ. ಜೀವನ ಕಾವ್ಯಮಯವಾಗಿರದು. ಹೋರಾಟಗಳನ್ನು, ತಪ್ಪುಗಳನ್ನು ಕುರಿತು ಚಿಂತಿಸದಿರಿ. ಒಂದು ದನವು ಸುಳ್ಳು ಹೇಳುವುದನ್ನು ನಾನು ಕೇಳೇ ಇಲ್ಲ; ಆದಾಗ್ಯೂ ಅದು ಒಂದು ದನ ಮಾತ್ರ– ಮನುಷ್ಯನಲ್ಲ. ಆದ್ದರಿಂದ ನಿಮ್ಮ ಸೋಲನ್ನು ಲೆಕ್ಕಿಸದಿರಿ. ಸಾವಿರ ಬಾರಿ ಆದರ್ಶವನ್ನು ಹಿಡಿದುಕೊಳ್ಳಿ. ಸಾವಿರ ಬಾರಿ ಸೋತರೂ ಇನ್ನೊಮ್ಮೆ ಪ್ರಯತ್ನಿಸಿ."

ಒಂದು ಆದರ್ಶವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದರೆ ಮೊದಲು ಅದನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡು ಅದಕ್ಕೆ ಸ್ಪಷ್ಟವಾದ ಆಕಾರವೊಂದನ್ನು ಕೊಡಬೇಕು. ಗುರಿ ಸೇರುವವರೆಗೂ ಅದನ್ನು ಮಧ್ಯದಲ್ಲಿಯೆ ಕೈಬಿಡದಿರುವಂತೆ ಪ್ರತಿಜ್ಞೆ ಮಾಡಬೇಕು. ಪ್ರತಿಜ್ಞೆಯ ಭಾವ ಗಾಢವಾದಷ್ಟೂ ಆದರ್ಶಗಳ ಪಾಲನೆಯಲ್ಲಿ ಗಾಂಭೀರ್ಯದ ಭಾವನೆ ಉದಿಸುತ್ತದೆ.

*ಲೇಖಕರು ಮೈಸೂರು ಶ್ರೀರಾಮಕೃಷ್ಣ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.*

ಪ್ರತಿಜ್ಞೆ ಮಾಡುವ ಸಮಯದಲ್ಲಿ ಸರ್ವಶಕ್ತನಾದ ಭಗವಂತನ ಸಹಾಯವನ್ನು ಕೋರಬೇಕು. ಅದರಿಂದ ಎರಡು ಪ್ರಯೋಜನಗಳಿವೆ. ಒಂದು, ತನ್ನ ಎಲ್ಲ ಕಾರ್ಯಸಾಧನೆಗಳಲ್ಲಿ ತನ್ನ ಹಿಂದೆ ಒಂದು ಮಹಾನ್ ಶಕ್ತಿಯು ಸಹಾಯ ಮಾಡುತ್ತಿದೆ ಎಂಬ ಶ್ರದ್ಧೆಯುಂಟಾಗಿ ಉತ್ಸಾಹದಿಂದಲೂ, ವೀರ್ಯವತ್ತರವಾಗಿಯೂ ಮನಸ್ಸು ಕಾರ್ಯದಲ್ಲಿ ತೊಡಗುತ್ತದೆ. ಇದರಿಂದ ಉದ್ದೇಶ ಸಿದ್ಧಿಸುತ್ತದೆ. ಎರಡನೆಯದಾಗಿ, ತಾನು ಮಾಡುತ್ತಿದ್ದೇನೆ ಎಂಬ ಅಹಂಕಾರ ಮನಸ್ಸಿಗೆ ಬಾರದು. ಅಹಂಕಾರರಹಿತವಾದ ಯಾವುದೇ ಕೆಲಸ – ಅದು ಉದ್ಯಮವಾಗಿರಬಹುದು, ಕಲೆ–ಸಾಹಿತ್ಯಗಳಾಗಿರಬಹುದು – ಈ ಎಲ್ಲ ತೆರನಾದ ಕಾರ್ಯವೂ ಸುಂದರವಾಗಿಯೂ, ದಕ್ಷತೆಯಿಂದಲೂ ಕೂಡಿದ್ದು, ಮಾಡಿದಾತನಿಗೆ ಅವಶ್ಯವಾಗಿ ಫಲವನ್ನು ನೀಡುತ್ತದೆ.

ವಿದ್ಯಾರ್ಥಿಗಳು ತಮ್ಮ ಪ್ರತಿಜ್ಞೆಗಳನ್ನು ದಿವ್ಯಾಗ್ನಿಯ ಮುಂದೆ ಕೈಗೊಳ್ಳುತ್ತಾರೆ. ಅದನ್ನೇ **ವಿದ್ಯಾರ್ಥಿಹೋಮ** ಎಂದು ಕರೆಯುತ್ತೇವೆ. ದೇವತೆಗಳನ್ನುದ್ದೇಶಿಸಿ ಹವಿಸ್ಸನ್ನು ಅಗ್ನಿಯಲ್ಲಿ ಹಾಕುವುದಕ್ಕೆ ಹೋಮವೆಂದು ಹೆಸರು. ಭಾರತದಲ್ಲಿ ಬಹಳ ಹಿಂದಿನಿಂದಲೂ ಈ ಪದ್ಧತಿಯಿತ್ತು. ಅಗ್ನಿಯಲ್ಲಿ ಸರ್ವಶಕ್ತನಾದ ಪರಮಾತ್ಮನನ್ನು ಆವಾಹನೆ ಮಾಡುವುದೆಂದರೆ, ನಮ್ಮೆದುರಿಗೆ ಕಾಣುವ ಅಗ್ನಿಯೇ ಪರಮಾತ್ಮನ ವ್ಯಕ್ತರೂಪವೆಂದು ಭಾವಿಸಿ ಅದರಲ್ಲಿ ಆಹುತಿಗಳನ್ನು ಕೊಡುವುದು. ಆ ಸಮಯದಲ್ಲಿ ನಾವು ಕೈಗೊಳ್ಳುವ ಪ್ರತಿಜ್ಞೆಗಳನ್ನು ಹೇಳುತ್ತೇವೆ.

ನಮ್ಮ ಎಲ್ಲ ದೈನಂದಿನ ಕಾರ್ಯಗಳಿಗೆ ಬೆಂಕಿ ಅತ್ಯಂತ ಆವಶ್ಯಕ. ನಾವು ಊಟ ಮಾಡಿ ಜೀವನಪೋಷಕ ಅಂಶಗಳನ್ನು ಅರಗಿಸಿಕೊಂಡು ಸುಖಜೀವನ ನಡೆಸಬೇಕಾದರೆ ಬೆಂಕಿ ಅತ್ಯಗತ್ಯವಾದ ಸಾಧನ. ಹಾಗೆಯೆ ಈ ಹೋಮದಲ್ಲಿ ನಾವು ತೆಗೆದುಕೊಳ್ಳುವ ಸಂಕಲ್ಪಗಳು ನಮ್ಮ ವಿದ್ಯಾರ್ಥಿ ಜೀವನದ, ತನ್ಮೂಲಕ ನಮ್ಮ ಸಮಗ್ರಜೀವನಕ್ಕೆ ಪೋಷಕವಾಗಬೇಕೆಂಬುದನ್ನು ಅಗ್ನಿ ನಮಗೆ ನೆನಪಿಸಿಕೊಡುತ್ತದೆ. ನಮ್ಮ ವಿದ್ಯಾರ್ಥಿ ಜೀವನವು ಸುಸಂಪನ್ನವಾಗಬೇಕು. ಇದರಿಂದ ನಮ್ಮ ಜೀವನವೆಲ್ಲವೂ ಆನಂದಮಯವಾಗುತ್ತದೆ. ನಮ್ಮಲ್ಲಿ ಪ್ರತಿಯೊಬ್ಬರ ಜೀವನವೂ ಸಮೃದ್ಧವಾದರೆ, ಇಡೀ ಸಮಾಜವೇ ಉತ್ತಮ ಗುಣಮಟ್ಟದ್ದಾಗುತ್ತದೆ. ಇದೇ ವಿದ್ಯಾರ್ಥಿ ಹೋಮದ ಉದ್ದೇಶ.

## ಸಂಕಲ್ಪ

ಮೊದಲಿಗೆ ಸಂಕಲ್ಪ ಮಾಡಿಕೊಳ್ಳುವುದು, ಅಂದರೆ, ನಾನು ಈ ದಿನ ಈ ಸ್ಥಳದಲ್ಲಿ ಇಂಥ ಕಾರ್ಯವನ್ನು ಇಂಥ ಉದ್ದೇಶಗಳಿಗಾಗಿ ಈಡೇರಿಸಲು ಮಾಡುತ್ತೇನೆ ಎಂದು ಘೋಷಿಸುವುದು. ಇದರಿಂದ ನಮ್ಮ ಕಾರ್ಯದಲ್ಲಿ ಸುನಿಶ್ಚಿತತೆ ಬರುತ್ತದೆ. ಎಷ್ಟೋ ವೇಳೆ ನಮಗೇನು ಬೇಕು ಎಂಬುದರ ಸ್ಪಷ್ಟ ಅರಿವು ನಮಗೇ ಇರುವುದಿಲ್ಲ. ಈ ರೀತಿಯ ಸಂಕಲ್ಪದಿಂದ ನಮ್ಮ ಉದ್ದೇಶವೇನು ಎಂಬುದರ ಸ್ಪಷ್ಟ ಅರಿವು ನಮಗೆ ಉಂಟಾಗುತ್ತದೆ. ಆ ಅರಿವಿನಿಂದ ಕಾರ್ಯವೆಸಗಲು ಬೇಕಾದ ಶಕ್ತಿ ನಮ್ಮೊಳಗಿಂದ ತನಗೆ ತಾನೇ ಮೂಡುತ್ತದೆ. ಕಾರ್ಯದಲ್ಲಿ ಕಷ್ಟಗಳು ಎದುರಾದಾಗ, ಎದುರಿಸಿ ಮುನ್ನುಗ್ಗುವ ಧೈರ್ಯ ಉಂಟಾಗುತ್ತದೆ. ಇದರಿಂದ ಒಬ್ಬ ವ್ಯಕ್ತಿ ಕಾರ್ಯಶೀಲನಾಗಿ ಯಶಸ್ಸನ್ನು ಪಡೆಯುತ್ತಾನೆ.

## ಸಂಕಲ್ಪ ಮಂತ್ರ

**ಶ್ರೀಭಗವತ್-ಪ್ರೀತಿ-ಕಾಮೋಽಹಮ್ ವಿದ್ಯಾ-ಬುದ್ಧಿ-ಶೌರ್ಯ-ವೀರ್ಯ-ಕಾಮಶ್ಚ, ವಿದ್ಯಾರ್ಥಿವ್ರತಮ್-ಅನುಷ್ಠಾತುಂ ಯಥಾಸಾಧ್ಯಂ ಯತಿಷ್ಯೇ । ತದರ್ಥಮ್ ಅದ್ಯ ಪುರೋಽವಸ್ಥಿತೇ ಪರಮಾತ್ಮ ದೇವತಾ-ನಾಮಾಗ್ನೌ 'ನಮಃ ಪರಮಾತ್ಮನೇ ಸ್ವಾಹಾ' ಇತಿ ಮಂತ್ರೇಣ ಸಂಕಲ್ಪಾನ್ ಉಚ್ಚಾರ್ಯ ಹೋಮಮಹಂ ಕರಿಷ್ಯೇ।**

**ಅರ್ಥ: ಭಗವಂತನ ಪ್ರೀತಿಗಾಗಿ, ವಿದ್ಯೆ-ಬುದ್ಧಿ-ಶೌರ್ಯ-ವೀರ್ಯಗಳನ್ನು ಬಯಸುತ್ತ, ಅದಕ್ಕಾಗಿ ಈ ವಿದ್ಯಾರ್ಥಿವ್ರತವನ್ನು ಆಚರಿಸಲು ನನ್ನ ಶಕ್ತ್ಯಾನುಸಾರ ಪ್ರಯತ್ನಿಸುತ್ತೇನೆ. ಅದಕ್ಕಾಗಿ ಇಂದು ನನ್ನ ಮುಂದೆ ಇರುವ, ಪರಮಾತ್ಮನೇ ದೇವತೆಯಾಗಿರುವ ಅಗ್ನಿಯಲ್ಲಿ, 'ನಮಃ ಪರಮಾತ್ಮನೇ ಸ್ವಾಹಾ' ಎಂಬ ಮಂತ್ರದಿಂದ ಸಂಕಲ್ಪವನ್ನು ಉಚ್ಚರಿಸಿ ನಾನು ಹೋಮವನ್ನು ಮಾಡುತ್ತೇನೆ.**

ಭಗವಂತನು ಪ್ರೀತನಾದರೆ ನಮ್ಮ ಕಾರ್ಯದಲ್ಲಿ ಸಿದ್ಧಿಯಾಗುತ್ತದೆ. ಹೀಗಾಗಿ ಮೊದಲಿಗೆ ಭಗವಂತನ ಪ್ರೀತಿಯನ್ನು ಬಯಸಿಯೆ ಉಳಿದುದನ್ನು ಮಾಡಬೇಕು. **ವಿದ್ಯೆ**ಯೆಂದರೆ ಎಲ್ಲ ಬಗೆಯ ಚತುರತೆ. **ಬುದ್ಧಿ**ಯೆಂದರೆ ವಿದ್ಯೆಯನ್ನು ಗಳಿಸಲು, ಹಾಗೆ ಗಳಿಸಿದ್ದನ್ನು ಜೀವನೋದ್ದೇಶದ ಸಿದ್ಧಿಗೆ ಚಾಕಚಕ್ಯತೆಯಿಂದ ಬಳಸುವ ಕುಶಲತೆ. ವಿದ್ಯಾರ್ಥಿದೆಸೆಯಲ್ಲಿ ವಿದ್ಯಾರ್ಜನೆ ಮಾಡುವಾಗ ಎದುರಾಗುವ ಅಡೆತಡೆಗಳು, ನಂತರದ ಜೀವನದಲ್ಲಿ ಎದುರಾಗುವ ಕಷ್ಟನಷ್ಟಗಳು-ಇವುಗಳನ್ನು ಎದುರಿಸಿ ಅವನ್ನು ಮೆಟ್ಟಿನಿಲ್ಲುವ ಧೈರ್ಯವೇ **ಶೌರ್ಯ**. ಈ ಶೌರ್ಯಕ್ಕಾಗಿ ಉಪಯೋಗಿಸಬೇಕಾದ, ನಮ್ಮೊಳಗೇ ಇರುವ ಮಹಾನ್ ಶಕ್ತಿಯೇ **ವೀರ್ಯ**. ಇವೆಲ್ಲ ಒಂದಕ್ಕೊಂದು ಪೂರಕ-ಪೋಷಕ. ಇವೇ ವಿದ್ಯಾರ್ಥಿಗೆ ಅತ್ಯವಶ್ಯವಾಗಿ ಬೇಕಾದ್ದು.

**ಯಥಾಸಾಧ್ಯಂ**: ಶಕ್ತ್ಯನುಸಾರವೆನ್ನುವುದು ನಮ್ಮ ಮಿತಿಯನ್ನು ನಮಗೆ ಮನವರಿಕೆ ಮಾಡಿಕೊಡುತ್ತದೆ. ನಮ್ಮ ಅಹಂಕಾರಕ್ಕೆ ಇದು ಒಂದು ಅಂಕುಶ. ನಮ್ಮೆದುರಿಗೆ ಇರುವ ಅಗ್ನಿಯಲ್ಲಿ ಸ್ವಯಂ ಪರಮಾತ್ಮನನ್ನೇ ಭಾವಿಸಿ, ಪೂಜಿಸಿ ಆಹುತಿಗಳನ್ನು ಅರ್ಪಿಸುವಾಗ ನಮ್ಮ ಕೋರಿಕೆಯನ್ನು ಈಡೇರಿಸಿಕೊಡು ಎಂದು ಪ್ರಾರ್ಥಿಸುವುದೇ ಹೋಮದ ಉದ್ದೇಶ. **ಸ್ವಾಹಾ** ಎನ್ನುವುದು ಯಾವುದಾದರೂ ದೇವತೆಯನ್ನುದ್ದೇಶಿಸಿ ಅಗ್ನಿಯಲ್ಲಿ ಆಹುತಿ ನೀಡುವಾಗ ಹೇಳುವಂತಹ ಮಂತ್ರ. ಇದಕ್ಕೆ ಯಾವುದೇ ವಿಶೇಷ ಅರ್ಥವಿಲ್ಲದಿದ್ದರೂ **ಅರ್ಪಣೆ** ಎಂಬರ್ಥದಲ್ಲಿ ಸ್ವೀಕರಿಸಬಹುದು. ಒಟ್ಟರ್ಥದಲ್ಲಿ **'ಪರಮಾತ್ಮನಿಗೆ ಅರ್ಪಿಸುತ್ತಿದ್ದೇವೆ, ಅವನಿಗೆ ನಮ್ಮ ನಮಸ್ಕಾರ'** ಎಂದಾಗುತ್ತದೆ.

**ಓಂ ಯಜ್ಜಾಗ್ರತೋ ದೂರಮುದೈತಿ ದೈವಂ ತದು ಸುಪ್ತಸ್ಯ ತಥೈವೇತಿ । ದೂರಂಗಮಂ ಜ್ಯೋತಿಷಾಂ ಜ್ಯೋತಿರೇಕಂ ತನ್ಮೇ ಮನಃ ಶಿವಸಂಕಲ್ಪಮಸ್ತು ।**

**ಅರ್ಥ: ಪುರುಷನು ಎಚ್ಚರವಾಗಿರುವಾಗ ಹಾಗೂ ನಿದ್ರಿಸುತ್ತಿರುವಾಗ, ಹತ್ತಿರದಲ್ಲಿಯೂ, ದೂರದಲ್ಲಿಯೂ ಯಾವುದು ತಾನೊಂದೇ ಸಂಚರಿಸುತ್ತದೋ, ಎಲ್ಲ ಬೆಳಕುಗಳಿಗೂ ಬೆಳಕಾದ ಆ ದಿವ್ಯವಾದ ಮನಸ್ಸು, ನನ್ನ ಪಾಲಿಗೆ ಇಂದು ಒಳ್ಳೆಯ ಸಂಕಲ್ಪಗಳಿಂದ ಕೂಡಿರಲಿ.**

ಉಪಕರಣ ಸರಿಯಾಗಿದ್ದರೆ ಗುರಿಯೂ ಸರಿಯಾಗಿರುತ್ತದೆ. ವಿದ್ಯಾರ್ಥಿಗಳ ಸಾಧನೆಗೆ ಬೇಕಾದ ಉಪಕರಣವೆಂದರೆ ಮನಸ್ಸು. ಮನಸ್ಸು ಸಾತ್ವಿಕವಾಗಿದ್ದರೆ ಉದ್ದೇಶ ಶೀಘ್ರದಲ್ಲಿ ಕೈಗೂಡುತ್ತದೆ. ಹೀಗಾಗಿ ನಮ್ಮ ಮನಸ್ಸು ಪ್ರಸನ್ನವಾಗಿರಲಿ, ಅದರಲ್ಲಿ ಯಾವುದೇ ಕೆಟ್ಟ ಭಾವನೆ ಏಳದಿರಲೆಂದು ನಾವು ಪ್ರಾರ್ಥಿಸಬೇಕು. ಮನಸ್ಸಿನ ಅದ್ಭುತ ಶಕ್ತಿಯನ್ನು ಈ ಮಂತ್ರದಲ್ಲಿ ಎಷ್ಟು ಸುಂದರವಾಗಿ ಚಿತ್ರಿಸಿದ್ದಾರೆ! ನಾವು ಹಗಲು ಹೊತ್ತಿನಲ್ಲಿ ಎಚ್ಚರವಾಗಿರುವಾಗ ಮನಸ್ಸು ಅದೆಷ್ಟು ಕಡೆಗಳಿಗೆ ಹರಿಯುತ್ತದೆ, ಅದೆಷ್ಟು ಚಿಂತನೆಗಳನ್ನು ಮಾಡುತ್ತದೆ, ಅದೆಷ್ಟು ಬಗೆಬಗೆಯ ವಸ್ತುಗಳನ್ನು ಸೃಷ್ಟಿಸುತ್ತದೆ! ಹಾಗೆಯೇ ನಾವು ಮಲಗಿ ಕನಸು ಕಾಣುವಾಗ ಕೂಡ ನಮ್ಮ ಮನಸ್ಸು ನಾವು ಎಚ್ಚರವಾಗಿರುವಾಗ ನೋಡಿದ ವ್ಯಕ್ತಿ, ವಸ್ತುಗಳನ್ನು ಮತ್ತೆ ನಮ್ಮ ಮುಂದೆ ತರುತ್ತದೆ! ಆಗ ಎಲ್ಲ ಕಡೆ ಕತ್ತಲು ಆವರಿಸಿದ್ದರೂ ಕನಸಿನಲ್ಲಿರುವ ವಸ್ತುಗಳು ಹೇಗೆ ತಾನೇ ನಮಗೆ ಸ್ಪಷ್ಟವಾಗಿ ಕಾಣುತ್ತದೆ? ಏಕೆಂದರೆ ಮನಸ್ಸು ದಿವ್ಯ ಅಂದರೆ ಪ್ರಕಾಶಸ್ವರೂಪವಾದದ್ದು. ಇದನ್ನು ಅವಲಂಬಿಸಿಯೇ ಲೌಕಿಕ ವಿದ್ಯಾರ್ಥಿಯಾದವನು ಲೌಕಿಕ ಜ್ಞಾನವನ್ನು ಸಂಪಾದಿಸುತ್ತಾನೆ (ವಿಜ್ಞಾನ, ಗಣಿತ, ಚರಿತ್ರೆಯ ಮೊದಲಾದವನ್ನು), ಆಧ್ಯಾತ್ಮಿಕ ವಿದ್ಯಾರ್ಥಿಯಾದವನು ಇಂದ್ರಿಯಗಳಿಗಿಂತ ಸೂಕ್ಷ್ಮವಾದ ತತ್ತ್ವಗಳನ್ನು ನೋಡುತ್ತಾನೆ. ಹೀಗಾಗಿ ಈ ಮನಸ್ಸು ಸುಸ್ಥಿತಿಯಲ್ಲಿರುವುದು ಬಹಳ ಮುಖ್ಯ.

(ಮುಂದುವರಿಯುವುದು)

## ಓದುವ ವಿಧಾನ : ಅಧ್ಯಯನದ ಮಹತ್ವ

**ಓದುವುದು ಒಂದು ಕಲೆ.** ಎಲ್ಲಾ ಬಗೆಯ ಪುಸ್ತಕಗಳನ್ನೂ ಒಂದೇ ರೀತಿಯಲ್ಲಿ ಓದುವುದು ಸಾಧ್ಯವಿಲ್ಲ. ಒಂದು ಕಾದಂಬರಿಯನ್ನು ಓದುವ ಹಾಗೆ ಪಠ್ಯಪುಸ್ತಕಗಳನ್ನು ಓದಲು ಸಾಧ್ಯವಿಲ್ಲ. ಹಾಗೆಯೇ ಓದುವುದರ ಹಿಂದಿನ ಉದ್ದೇಶ ಬಹಳ ಮುಖ್ಯ.

ಓದುವುದಕ್ಕೆ ಪ್ರೇರೇಪಣೆಗಳು ಇವು: **೧. ಕಾಲ ಕಳೆಯಲು ೨.ಕುತೂಹಲವನ್ನು ತಣಿಸಿಕೊಳ್ಳಲು ೩. ಮಾಹಿತಿಗಳನ್ನು ಪಡೆಯಲು ೪. ಆಳವಾದ ಜ್ಞಾನವನ್ನು ಪಡೆಯಲು ೫. ಹೊಸ ಕಾರ್ಯಗಳನ್ನು ಮಾಡಲು ಕುಶಲತೆಗಳನ್ನು ಬೆಳೆಸಿಕೊಳ್ಳಲು.** ಇವುಗಳಲ್ಲಿ ಕೇವಲ ಕಾಲ ಕಳೆಯುವುದಕ್ಕೆ ಓದುವುದಕ್ಕಿಂತ ಗಂಭೀರ ರೂಪದ ಓದು ಉತ್ತಮ. ಕೇವಲ ಮಾಹಿತಿಗಳನ್ನು ಪಡೆದುಕೊಳ್ಳಲು ಓದುವುದಕ್ಕಿಂತ ಕೌಶಲವನ್ನು ಬೆಳೆಸಿಕೊಳ್ಳಲು ಓದುವುದು ಉತ್ತಮ. ಎಲ್ಲಕ್ಕಿಂತಲೂ ಉತ್ತಮವಾದುದು ಆಳವಾದ ಜ್ಞಾನವನ್ನು ಪಡೆದುಕೊಳ್ಳಲು ಓದುವುದು.

**ಅಧ್ಯಯನದಲ್ಲಿ ಪ್ರೀತಿಯನ್ನು ಬೆಳೆಸುವುದು** ಶಿಕ್ಷಣದ ಮುಖ್ಯ ಉದ್ದೇಶಗಳಲ್ಲಿ ಒಂದು. ಅಧ್ಯಯನದ ಕಲೆಯನ್ನು ಅರಿತ ವಿದ್ಯಾರ್ಥಿಯು ಯಾವುದನ್ನು ಬೇಕಾದರೂ ಕಲಿಯಬಲ್ಲ. ಓದುವ ಹವ್ಯಾಸವನ್ನು ಬೆಳೆಸಿಕೊಳ್ಳದ ವಿದ್ಯಾರ್ಥಿ ತನ್ನ ಸಮಯವನ್ನು ಹಾಳು ಮಾಡಿಕೊಳ್ಳುತ್ತಾನೆ. ಒಟ್ಟಾರೆ, ಅಧ್ಯಯನ ಎಂದರೆ ಜ್ಞಾನದ ಅನ್ವೇಷಣೆ. ಅಧ್ಯಯನ ಮಾಡಲು ಬೇಕಾದುದು **ಏಕಾಗ್ರತೆ**. ನೀವು ಓದುತ್ತಿರುವ ವಿಷಯದಲ್ಲಿ ನಿಮಗೆ **ಆಸಕ್ತಿ** ಇಲ್ಲದಿದ್ದರೆ ನಿಮಗೆ ಏಕಾಗ್ರತೆ ಸಿದ್ಧಿಸುವುದಿಲ್ಲ.

**(ಮುಂದಿನ ತಿಂಗಳು: ಓದಿನಲ್ಲಿ ಆಸಕ್ತಿಯನ್ನು ಬೆಳೆಸಿಕೊಳ್ಳುವುದು ಹೇಗೆ?)**